ಎಂ ವಿ ಸಿ. ನಂ. 276/2023 ಪಿಡಬ್ಲೂಃ 2

ದಿನಾಂಕಃ 10-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ವಿ.ಸಿ. ಮೂಲಕಃ ಪಾಟೀ ಸವಾಲುಃ**

**ಮುಂದುವರಿದ ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿಃ ಶ್ರೀ ಎಸ್.ಎಂ.ಬಿ. ವಕೀಲರಿಂದಃ**

ಅಂಗ ನ್ಯೂನ್ಯತಾ ಪ್ರಮಾಣ ಪತ್ರ ಕೊಡುವಾಗ ಒಬ್ಬ ವ್ಯಕ್ತಿಯ ಚಿಕಿತ್ಸೆ ಮುಗಿದ ಎಷ್ಟು ದಿನಗಳ, ಎಷ್ಟು ತಿಂಗಳ ನಂತರಕೊಡುತ್ತೀರಿ ಎಂದರೆ ಸಾಕ್ಷಿ ಎಷ್ಟು ದಿನ ಎಂದು ಹೇಳಲು ಬರುವುದಿಲ್ಲ . Best possible result and no further improvement possible ಎಂದು ಇದ್ದಾಗ ಅಂಗ ನ್ಯೂನ್ಯತಾ ಪ್ರಮಾಣ ಪತ್ರವನ್ನು ನೀಡುತ್ತೇವೆ. ಯಾವುದೇ ಒಬ್ಬ ವ್ಯಕ್ತಿಯ ಮುಂದುವರಿದ ಚಿಕಿತ್ಸೆ ಅವಶ್ಯಕತೆ ಇದ್ದಾಗ ಅಂಗ ನ್ಯೂನ್ಯತಾ ಪ್ರಮಾಣ ಪತ್ರ ಕೊಡಲು ಬರುತ್ತದೆಯೋ ಇಲ್ಲವೋ ಎಂದರೆ ಸಾಕ್ಷಿ ಮುಂದುವರೆದ ಚಿಕಿತ್ಸೆ ಯಾವುದು ಎನ್ನುವುದರ ಮೇಲೆ ಅವಲಂಬಿತವಾಗಿರುತ್ತದೆ ಎಂದು ನುಡಿದಿರುತ್ತಾರೆ. ಮುಂದುವರೆದ ಚಿಕಿತ್ಸೆ ಎಂದರೆ ಆ ವ್ಯಕ್ತಿಯ ನ್ಯೂನ್ಯತೆಯ ಪ್ರಮಾಣ ಕಡಿಮೆಯಾಗಲು ಚಿಕಿತ್ಸೆ ಕೊಡುವುದು ಎಂದರೆ ಹಾಗೆ ಸೂಚಿಸುವುದು ಸರಿಯಲ್ಲ. ದಿಃ 09-03-2023 ರ ಡಿಸಚಾರ್ಜ ಸಮ್ಮರಿಯಲ್ಲಿ 4 ನೇ ಪುಟದಲ್ಲಿ He is not willing for further 3 weeks stay in hospital ಎಂದು ಬರೆದಿದೆ ಎಂದರೆ ಸರಿ. ವೈದ್ಯರು 3 ವಾರ ಇರಲು ಹೇಳಿದರೂ ಕೂಡ ಗಾಯಾಳು ಇರಲು ಇಚ್ಛಿಸಿಲ್ಲ ಅದು Medical advise ಗೆ ವಿರುದ್ಧವಾಗುತ್ತದೆ ಎಂದರೆ ಸರಿಯಲ್ಲ . ಆಸ್ಪತ್ರೆಯಿಂದ ಟ್ರಿಟಮೆಂಟ್ ಬಾಕಿ ಇರುವಾಗ ಡಿಸಚಾರ್ಜ ಹೊಂದಿದ್ದಾರೆ ಎಂದರೆ ಸರಿಯಲ್ಲ . ಆಸ್ಪತ್ರೆಯಲ್ಲಿದ್ದರೆ ಮೂರು ವಾರ ಟ್ರಿಟಮೆಂಟ್ ಆಗುತ್ತಿತ್ತು . ಆದರೆ ಮನೆಗೆ ತೆಗೆದುಕೊಂಡು ಹೋಗಿ

ಟ್ರಿಟಮೆಂಟ್ ತೆಗೆದುಕೊಂಡಿರುತ್ತಾರೆ. ಡಿಸಚಾರ್ಜ ಸಮ್ಮರಿಯನ್ನು ಪ್ಲಾಸ್ಟಿಕ್ ಸರ್ಜರಿ ಡಿಪಾರ್ಟಮೆಂಟ ನವರು ನೀಡಿರುತ್ತಾರೆ ಎಂದರೆ ಸರಿ . ಪ್ಲಾಸ್ಟಿಕ್ ಸರ್ಜರಿ ಡಿಪಾರ್ಟಮೆಂಟ ನಲ್ಲಿ ನಾನು ಟ್ರಿಟಮೆಂಟ್ ಕೊಟ್ಟಿಲ್ಲ ಎಂದರೆ ಸಾಕ್ಷಿ ನಾನು ಆರ್ಥೋಪೆಡಿಕ ಹಾಗೂ ಪ್ಲಾಸ್ಟಿಕ್ ಸರ್ಜರಿ ಎರಡು ಚಿಕಿತ್ಸೆ ಒಟ್ಟೊಟ್ಟಿಗೆ ಕೊಟ್ಟಿರುವುದು ಎಂದು ನುಡಿದಿರುತ್ತಾರೆ. ಆರ್ಥೋಪೆಡಿಕ ಹಾಗೂ ಪ್ಲಾಸ್ಟಿಕ್ ಸರ್ಜರಿ ಡಿಪಾರ್ಟಮೆಂಟ್ ಎರಡು ಬೇರೆ ಬೇರೆ ಇವೆ. ಪ್ಲಾಸ್ಟಿಕ್ ಸರ್ಜರಿ ಡಿಪಾರ್ಟಮೆಂಟ್ ಗೆ ನಾನೇ ರೆಫರ್ ಮಾಡಿರುತ್ತೇನೆ. ಈ ವ್ಯಕ್ತಿಗೆ ನಾನು ಪ್ಲಾಸ್ಟಿಕ್ ಸರ್ಜರಿ ಟ್ರಿಟಮೆಂಟ್ ಮಾಡಿಲ್ಲ . ಡಿಸಚಾರ್ಜ ಸಮ್ಮರಿಯನ್ನು ಪ್ಲಾಸ್ಟಿಕ್ ಸರ್ಜರಿ ಡಿಪಾರ್ಟಮೆಂಟ್ ನವರು ನೀಡಿರುತ್ತಾರೆ ಎಂದರೆ ಸರಿ . ಅಂಗನ್ಯೂನತಾ ಪ್ರಮಾಣ ಪತ್ರದಲ್ಲಿ ಬರೆದಿರುವಂತೆ ಗಾಯಾಳು ಮುಂದುವರಿದ ಚಿಕಿತ್ಸೆಯನ್ನು ಪಡೆದರೆ ಅವರಿಗೆ ಇರುವ ನೋವು , ನ್ಯೂನ್ಯತೆ, ತೊಂದರೆ ಕಡಿಮೆಯಾಗುತ್ತದೆ ಎಂದರೆ ಸಾಕ್ಷಿ ಅಂಗ ನ್ಯೂನ್ಯತೆ ಕಡಿಮೆಯಾಗುವುದಿಲ್ಲ . ನೋವು ಕಡಿಮೆಯಾಗುತ್ತದೆ ಹಾಗೂ ನಂಜು ಹರಡುವುದು ಕಡಿಮೆಯಾಗುತ್ತದೆ ಹಾಗೂ ಕೃತಕ ಕಾಲು ಜೋಡಣೆಗೆ ಸಹಾಯವಾಗುತ್ತದೆ ಎಂದು ನುಡಿದಿರುತ್ತಾರೆ . ನಂಜು ಹರಡುವುದು ಕಡಿಮೆಯಾದರೆ ಹಾಗೂ ಕೃತಕ ಕಾಲು ಜೋಡಣೆ ಮಾಡಿದರೆ ನಾನು ಅಂಗ ನ್ಯೂನ್ಯತಾ ಪ್ರಮಾಣ ಪತ್ರದಲ್ಲಿ ಬರೆದಿರುವ ನ್ಯೂನ್ಯತಾ ಪ್ರಮಾಣ ಕಡಿಮೆಯಾಗುತ್ತದೆ ಎಂದರೆ ಹಾಗೇ ಸೂಚಿಸುವುದು ಸರಿಯಲ್ಲ . ಒಳಜೋಡಣೆ ತೆಗೆದ ನಂತರ ಅಂಗ ನ್ಯೂನ್ಯತೆಯ ಪ್ರಮಾಣ ಕಡಿಮೆಯಾಗುತ್ತದೆ ಎಂದರೆ ಹಾಗೇ ಸೂಚಿಸುವುದು ಸರಿಯಲ್ಲ. ಅರ್ಜಿದಾರರಿಗೆ ನಾನು ನೀಡಿದಷ್ಟು ಅಂಗ ನ್ಯೂನ್ಯತಾ ಪ್ರಮಾಣ ಇಲ್ಲ ಎಂದರೆ ಹಾಗೇ ಸೂಚಿಸುವುದು ಸರಿಯಲ್ಲ. ಅರ್ಜಿದಾರರಿಗೆ ಮುಂದುವರಿದ ಚಿಕಿತ್ಸೆ ಹಾಗೂ ಅದಕ್ಕೆ ಪ್ರಮಾಣ ಪತ್ರದಲ್ಲಿ ಬರೆದಷ್ಟು ಹಣದ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ . ಗಾಯಾಳು ನಮ್ಮ ಆಸ್ಪತ್ರೆಯಲ್ಲಿದಚಿಕಿತ್ಸೆ ಪಡೆದಿದ್ದರಿಂದ ಅವರಿಗೆ ಸಹಾಯ ಮಾಡಬೇಕೆಂದು ಅವರಿಗೆ ಸುಳ್ಳು ಅಂಗ ನ್ಯೂನ್ಯತಾ ಪ್ರಮಾಣ ಪತ್ರವನ್ನು ನೀಡಿದ್ದೇನೆ ಹಾಗೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ : ಇಲ್ಲ.</u>

ಪಿಡಬ್ಲ್ಯೂ: 2

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.